

ವಿಶ್ವವಿದ್ಯಾಲಯದ ಟ್ರಿನಿಟಿ ಕಾಲೇಜಿನ ಪ್ರಾಧ್ಯಾಪಕ ಜಿ.ಹೆಚ್. ಹಾರ್ಡಿ. ಅಂಚೆಯ 11 ಪುಟಗಳಲ್ಲಿದ್ದ 120 ಸಮೀಕರಣಗಳನ್ನು ನೋಡಿ ಬೆರಗಾದರು. 'ಇವನಾರೋ ನಿಸ್ಸೀಮನಿರಬೇಕು!' ಎಂದುಕೊಂಡು, ಕೂಡಲೇ ರಾಮಾನುಜನ್ ಅವರನ್ನು ಕೇಂಬ್ರಿಡ್ಜ್‌ಗೆ ಕರೆಸಿಕೊಳ್ಳುವ ಏರ್ಪಾಟು ಮಾಡಿದರು.

ಇತ್ತ ರಾಮಾನುಜನ್ 'ಬರಲಾರೆ, ನಾನು ಸಪ್ತ ಸಾಗರ ದಾಟಲಾರೆ' ಎಂದು ಹಟ ಹಿಡಿದರು. ಹೇಗಾದರೂ ಕರೆಸಿಕೊಳ್ಳಲು ಹಾರ್ಡಿ ಸನ್ನಾಹಗಳನ್ನು ಹೂಡಿದರು. ಅಂದಿಗೂ ಇಂದಿಗೂ ಎಷ್ಟು ವ್ಯತ್ಯಾಸ! ಆಗ ರಾಮಾನುಜನ್‌ರ ಮನಸ್ಸನ್ನು ಬದಲಾಯಿಸಿದ್ದು ನಿಜವಾಗಿ ದೈವವೇ. ಅವರ ತಾಯಿ ಕೋಮಲತಾಮ್ಮಾಳ್ ಕನಸಿನಲ್ಲಿ ಬಂದ ದೇವಿ, 'ನಿನ್ನ ಮಗ ಮಹಾಮೇಧಾವಿ. ಅವನ ಏಳಿಗೆಯನ್ನು ತಡೆಯಬೇಡ' ಎಂದಳು. ಇದಲ್ಲದೆ ರಾಮಾನುಜನ್ ಮತ್ತು ನಾರಾಯಣ ಅಯ್ಯರ್ ನಾಮಕ್ಕಲ್ ದೇವಸ್ಥಾನಕ್ಕೆ ಹೋಗಿ ಸೇವೆ ಮಾಡಿದರು. ಒಂದು ಜ್ಯೋತಿ ಅವರ ಕನಸಿನಲ್ಲಿ ಕಾಣಿಸಿಕೊಂಡಿತು. ಅದನ್ನು ವಿದೇಶಕ್ಕೆ ಹೋಗಲು ಅನುಮತಿ ಎಂದು ಬಗೆಯಲಾಯಿತು. ಹೀಗಾಗಿ ರಾಮಾನುಜನ್ ಕೇಂಬ್ರಿಡ್ಜ್‌ಗೆ ಪ್ರಯಾಣ ಬೆಳೆಸಿದರು.

ಹಾರ್ಡಿ ಮತ್ತಿತರ ಗಣಿತ ಪಂಡಿತರು ಹತ್ತಿರವೇ ಇದ್ದದ್ದು ರಾಮಾನುಜನ್ ಅವರಿಗೆ ಪರಮ ಸಂತೋಷ. ಐದು ವರ್ಷ ನಿರಂತರ ಸಂಶೋಧನೆ ನಡೆಯಿತು. **Partitions, Continued Fractions, Definition of Pi, Mock – Theta Functions,** ಮುಂತಾದ ವಲಯಗಳಲ್ಲಿ ಅತ್ಯುನ್ನತ ಎನ್ನಬಹುದಾದ ಫಲಿತಾಂಶಗಳು ದೊರೆತವು. ಅನೇಕ ಪಂಡಿತ ಪ್ರಬಂಧಗಳು ಪ್ರಕಟಗೊಂಡವು. ಭಾರತದ ಕಾಲೇಜಿನಲ್ಲಿ ನಾಲಾಯಕ್ಕು ಎನಿಸಿದ ವಿದ್ಯಾರ್ಥಿ 'ಫೆಲೋ ಆಫ್ ರಾಯಲ್ ಸೊಸೈಟಿ' (FRS) ಮತ್ತು 'ಫೆಲೋ ಆಫ್ ಟ್ರಿನಿಟಿ ಕಾಲೇಜ್' ಆದ. ಆತನ ಹೆಸರು ಜಗತ್ತಿನ ಖ್ಯಾತ ಗಣಿತಜ್ಞರ ಪಟ್ಟಿಯಲ್ಲಿ ಸೇರಿತು.




ರಾಮಾನುಜನ್‌ರ ಹಸ್ತಪ್ರತಿಯ ಒಂದು ಪುಟ




ರಾಮಾನುಜನ್‌ರ ಬದುಕಿನ ಕಥೆ ಆಧರಿಸಿದ **'The Man Who Knew Infinity'** ಸಿನಿಮಾದ ಒಂದು ಚಿತ್ರ

ಮತ್ತೊಂದು ಕಡೆ ಇದ್ದದ್ದು ಶೋಕಚಕ್ರ. ಇಂಗ್ಲೆಂಡಿನಲ್ಲಿ ಅತೀವ ಚಳಿ. ಕೋಣೆಯಲ್ಲಿ ಹೀಟರ್‌ನಂತಹ ಸಲಕರಣೆಗಳಿಲ್ಲ, ಆಹಾರವೇ ದೊಡ್ಡ ಸಮಸ್ಯೆ ಆಯಿತು. ಸಂಶೋಧನೆಗೆ ಅಡ್ಡಿ ಅಡಚಣೆಗಳಿರಬಾರದು ಎಂದು ಮಿಕ್ಕವರು ಹೇಳಿದ್ದರಿಂದಾಗಿ ಹೆಂಡತಿ ಮದರಾಸಿನಲ್ಲಿಯೇ ಉಳಿದಿದ್ದಳು. ಮನೆಯಲ್ಲಿ ಅತ್ತೆಯೇ ಯಜಮಾನಿ. ಸೊಸೆ ಮಾತನಾಡುವಂತಿರಲಿಲ್ಲ. ಹೀಗಾಗಿ ಗಂಡನಿಗೆ ಆಕೆಯಿಂದ ಒಂದೂ ಪತ್ರವಿಲ್ಲ. ಅತ್ತೆಯ ಕಾಟ ತಡೆಯಲಾರದೇ ಮದುವೆಗೆಂದು ಹೋಗಿದ್ದ ಜಾನಕಿ ಕರಾಚಿಯಲಿದ್ದ ಅಣ್ಣನ ಮನೆಯಲ್ಲಿಯೇ ಉಳಿದುಕೊಂಡರು. ಏಕಾಂಗಿಯಾದರು ರಾಮಾನುಜನ್. ದಾರಿ ತೋರದೆ ಅವರು ಟ್ರೈನ್ ಒಂದರ ಮುಂದೆ ಬಿದ್ದು ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ಉಂಟು.

ಆರೋಗ್ಯ ಕ್ಷೀಣಿಸಿತು. ವಿಧಿಯಿಲ್ಲದೆ ಭಾರತಕ್ಕೆ ಹಿಂದಿರುಗಬೇಕಾಯಿತು. ಬೊಂಬಾಯಿಗೆ ಹಡಗಿನಲ್ಲಿ ಬಂದಾಗ ಅವರನ್ನು ಸ್ವಾಗತಿಸಿದ್ದು ತಂದೆ ಮತ್ತು ತಾಯಿ. ಹೆಂಡತಿ ಅಲ್ಲಿರಲಿಲ್ಲ. ರಾಮಾನುಜನ್ ಮರಳಿ ಬಂದ ಸುದ್ದಿಯನ್ನು ಆಕೆ ವೃತ್ತಪತ್ರಿಕೆಯಲ್ಲಿ ಓದಿ ತಿಳಿದುಕೊಂಡರು! ಮುಂದೆ ಅವರಿಬ್ಬರೂ ಒಟ್ಟಿಗೆಯೇ ಇದ್ದರು, ತಾಯಿಯ ನಿಗಾ ಇದ್ದೇ ಇತ್ತು. ಮರುಗಿದರು ರಾಮಾನುಜನ್. ಅವರೊಡನೆ ಜಾನಕಿ ಇಂಗ್ಲೆಂಡಿನಲ್ಲಿ ಇದ್ದಿದ್ದರೆ ಅವರ ಆರೋಗ್ಯ ಈ ಸ್ಥಿತಿಗೆ ಇಳಿಯುತ್ತಿರಲಿಲ್ಲ.

ಗಂಡನನ್ನು ಐದು ವರ್ಷಗಳ ನಂತರ ನೋಡಿದ ಜಾನಕಿ ಮುಮ್ಮಳಿಸಿದರು. 'ಮೂಳೆಗಳ ಚೀಲವಾಗಿದ್ದರು ಅವರು' ಎಂದು ಉದ್ಗರಿಸಿದರು. ಹೌದು, ಸಾಯಲೆಂದೇ ಅವರು ಭಾರತಕ್ಕೆ ಮರಳಿದ್ದರು.

ಹಿಂದಿರುಗಿದ ರಾಮಾನುಜನ್ ಬದುಕಿದ್ದು ಒಂದು ವರ್ಷ ಮಾತ್ರ. ಆಗಲೂ ಸುಮ್ಮನಿರಲಿಲ್ಲ. ಮರಣ ಶಯ್ಯೆಯಲ್ಲಿಯೇ **Mock – Theta Functions** ಕುರಿತು 650 ಪ್ರಮೇಯಗಳನ್ನು ಕಂಡುಹಿಡಿದರು. ಅವರ ಹೆಸರನ್ನು ಅಮರವಾಗಿಸಲು ಇದೊಂದೇ ಸಾಕಾಗಿತ್ತು ಎಂಬುದು ವಿದ್ವಾಂಸರ ಅಭಿಪ್ರಾಯ. ಅಸುನೀಗಿದ ಮೂರು ದಿನಗಳ ಹಿಂದೆ ಕೂಡ ಅವರು ಪ್ರಮೇಯವೊಂದನ್ನು ತಮ್ಮ ನೋಟ್ ಬುಕ್ಕಿನಲ್ಲಿ ಬರೆದಿದ್ದರು.

ಭಾರತದಲ್ಲಿ ಸಂಚರಿಸಿ ರಾಮಾನುಜನ್‌ರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ **'The Man Who Knew Infinity'** ಎನ್ನುವ ಗ್ರಂಥವನ್ನು ರಚಿಸಿ ರಾಮಾನುಜನ್ ಅವರ ಜೀವನದ ಬಗ್ಗೆ ನಮಗೆ ತಿಳಿಸಿದ ರಾಬರ್ಟ್ ಕಾನಿಗಲ್ ಅವರನ್ನು ಈ ಸಂದರ್ಭದಲ್ಲಿ ಹೆಸರಿಸಬೇಕು. ಆ ಕೃತಿಯ ಹೆಸರಿನ ಚಲನಚಿತ್ರವೂ ತೆರೆಕಂಡಿದೆ.

ವಿಶ್ವಮಟ್ಟದಲ್ಲಿ ಖ್ಯಾತರಾದ ಭಾರತೀಯರಲ್ಲಿ ಶ್ರೀನಿವಾಸ ರಾಮಾನುಜನ್ ಅಗ್ರಗಣ್ಯರಾದವರು ಎನ್ನುವುದರಲ್ಲಿ ಸಂದೇಹವೇ ಇಲ್ಲ.